**ಸಾಕ್ಷಿಗೆ ದಿನಾಂಕಃ 12.01.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಶ್ರೀ. ವಿ.ಕೆ.ಎಂ. ವಕೀಲರಿಂದಃ**

ಸರ್ವೆ ನಂ. 25/1 ಮತ್ತು 25/2ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 25/2, ಸರ್ವೆ ನಂ. 25/1 ಆಗಿದ್ದು ಯಾವ ವರ್ಷ ಎಂದು ನನಗೆ ಗೊತ್ತಿಲ್ಲ. ಮಹದೇವಯ್ಯ ಬಿನ್ ಪಿಣ್ಣನಾಯಕ, ನಿಂಗಮ್ಮ ಕೋಂ ಲೇಟ್ ರಾಚನಾಯಕ ಮತ್ತು ಮಾದಯ್ಯ ಬಿನ್ ಲೇಟ್ ಕ್ಯಾತಯ್ಯ ನವರಿಗೆ ಸರ್ಕಾರದವರು ಸ್ವತ್ತುಗಳನ್ನು ಗುರುತಿಸಿರುವುದಿಲ್ಲ. ನಾಲ್ಕು ಜನರಿಗೂ ನಿ.ಪಿ.1 ಮತ್ತು ನಿ.ಪಿ.2ರ ಪ್ರಕಾರ ಯಾವ ಯಾವ ದಿಕ್ಕಿನಲ್ಲಿ ಸ್ವತ್ತುಗಳು ಬರುತ್ತವೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡ ಬಗ್ಗೆ ಪತ್ರ ಇರುತ್ತದೆ. ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ವಿಭಾಗಪತ್ರದಲ್ಲಿ ಸರ್ವೆ ನಂ.25/2ನ್ನು ವಿಭಾಗ ಮಾಡಿಕೊಂಡಿರುತ್ತೇವೆ. ಸರ್ವೆ ನಂ. 25/1 ನಮಗೆ ಪಿತ್ರಾರ್ಜಿತ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 25/2 ನಮಗೆ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ.

ಪ್ರತಿವಾದಿಗಳು ಸರ್ವೆ ನಂ.25/1ರಲ್ಲಿ ವ್ಯವಸಾಯ ಮಾಡುತ್ತಿರುವ ಬಗ್ಗೆ ನಾನು ನೋಡಿರುವುದಿಲ್ಲ. ಸರ್ವೆ ನಂ.25/1 ಮತ್ತು 25/2 ನಮಗೆ ಸೇರಿದ ಸ್ವತ್ತು ಆಗಿರುತ್ತದೆ. ನಾವುಗಳು ಈಗಾಗಲೆ ಸರ್ವೆ ನಂ.25/2ನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಆದ್ದರಿಂದ ಸರ್ವೆ ನಂ.25/1ನ್ನು ನಮ್ಮದು ಎಂದು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವುಗಳು ಸ್ವಾಧೀನಾನುಭವವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸ್ವತ್ತುಗಳು ಅದಲು ಬದಲಾದ ಬಗ್ಗೆ ಕಂದಾಯ ಇಲಾಖೆಯಲ್ಲಿ ನಡವಳಿಕೆಗಳು ನಡೆದಿರುವುದಿಲ್ಲ. ಸರ್ವೆ ನಂ.25/1 ಮತ್ತು 25/2 ಕ್ಕೆ ಸಂಬಂಧಿಸಿದಂತೆ ನಾನು ಮತ್ತು ಪ್ರತಿವಾದಿಗಳು ಜಂಟಿಯಾಗಿ ಅರ್ಜಿ ಸಲ್ಲಿಸಿ ಸ್ವತ್ತುಗಳನ್ನು ಅಳತೆ ಮತ್ತು ಸ್ವಾಧೀನವನ್ನು ಗುರುತಿಸಲು ಹಾಗೂ ಹದ್ದುಬಸ್ತು ಮಾಡಲು ತೊಂದರೆ ಇರುವುದಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಸಲು ದಾವಾ ಸಂ.25/2016 ನ್ನು ಪ್ರತಿವಾದಿಗಳು ಸಲ್ಲಿಸಿದ್ದು, ಅದರಲ್ಲಿ ಸರ್ವೆ ನಂ.25/1ರಲ್ಲಿ 1 ಎಕರೆ 5 ಗುಂಟೆ ಹಾಗೂ ಇತರ ಸ್ವತ್ತುಗಳನ್ನು ವಿಭಾಗ

ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಸದರಿ ಸ್ವತ್ತಿನ ಮೇಲೆ ಅಂತಿಮ ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನನ್ನು ಮಾರಾಟ ಮಾಡಿರುವ ಕಾರಣ ಪ್ರತಿವಾದಿಗಳ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಅಂತಿಮ ಡಿಕ್ರಿಯನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2021 ರಲ್ಲಿ ಮಾತ್ರ ಕಂದಾಯವನ್ನು ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.12 ನ್ನು ಸೃಷ್ಟಿ ಮಾಡಿರುತ್ತೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು, ಅದಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಈಗಲೂ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**